ಮೈಸೂರು ತಾಲ್ಲೂಕಿನಲ್ಲಿ ಗಣಿಗಾರಿಕೆ ಅವಧಿ ವಿಸ್ತರಣೆ

2092 (2510) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನ ದೊಡ್ಡ ಕಾನ್ಯ ಗ್ರಾಮದ ಬಳಿ ಟಾಟಾ ಮೈನ್ಸ್‌ರವರು ಗಣಿಗಾರಿಕೆ ಅವಧಿ ಮುಗಿದಿದ್ದು ಈಗ ಈ ಪ್ರದೇಶ ಯಾರ ವಶದಲ್ಲಿದೆ;

ಆ) ಅವರು ಬಿಟ್ಟು ಹೋಗಿರುವ ಸ್ಥಿರಾಸ್ತಿ ಎಷ್ಟು; ಗಣಿಗಾರಿಕೆ ನಡೆಸುತ್ತಿದ್ದ ಪ್ರದೇಶ ಎಷ್ಟು;

ಇ) ಈಗ ಈ ಸ್ಥಳವನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಸಲು ಇಚ್ಛಿಸಿದೆ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮವೇನು;

ಈ) ಈ ಸ್ಥಳದಲ್ಲಿ ಮತ್ತೆ ಗಣಿಗಾರಿಕೆ ಅವಧಿ ವಿಸ್ತರಿಸುವ ಇರಾದೆ ಸರ್ಕಾರಕ್ಕೆ ಇದೆಯೆ;

ಉ) ಹೌದಾದರೆ, ಆಸಕ್ತಿ ವಹಿಸಿರುವ ವ್ಯಕ್ತಿ; ಸಂಸ್ಥೆ ಯಾವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಮೈಸೂರು ತಾಲ್ಲೂಕಿನ ದೊಡ್ಡಕಾನ್ಯ ಗ್ರಾಮದ ಬಳಿ ಟಾಟಾ ಮೈನ್ಸ್‌ರವರ ಗಣಿಗಾರಿಕೆ ಅವಧಿಯು ದಿನಾಂಕ 20-8-2002ಕ್ಕೆ ಮುಗಿದಿದ್ದು, ಆದನ್ನು ಅವರು ಆಧ್ಯರ್ಪಣೆ ಮಾಡಿದ್ದು, ಪ್ರಸ್ತುತ ಈ ಗಣಿಯು ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವಶದಲ್ಲಿದೆ.

ಆ) ಮೆ: ಟಾಟಾ ಸಂಸ್ಥೆಯವರು ಗಣಿಗುತ್ತಿಗೆ ಆಧ್ಯರ್ಪಣೆ ಮಾಡಿದ ನಂತರ ಬಿಟ್ಟು ಹೋದ ಆಸ್ತಿಯ ವಿವರ:-

1) 59.69 ಹೆಕ್ಟೇರ್ (147-18 ಎಕರೆ) ಗಣಿಗಾರಿಕೆ ನಡೆಸುತ್ತಿದ್ದ ಪ್ರದೇಶ.

2) ಕಟ್ಟಡಗಳು ಮತ್ತು ಮೂಲಭೂತ ಸೌಕರ್ಯಗಳು

3) ಬೆಲೆಬಾಳುವ 50,000 ಮರಗಳು ಹಾಗೂ ಗಿಡಗಳಿರುವ ಪ್ರದೇಶ

4) 395 ಮೆಟ್ರಿಕ್ ಟನ್‌ನಷ್ಟು ಡುನೈಟ್ ಖನಿಜದ ಸಿದ್ಧ ವಸ್ತುಗಳು

5) ಮರದ ಪೆಟ್ಟಿಗೆಯೊಳಗಿಟ್ಟು ಕೋಣೆಯಲ್ಲಿ ಭದ್ರಪಡಿಸಿರುವ ಅನ್ವೇಷಣಾ ಕೊಳವೆ ರಂಧ್ರಗಳ 56 ದಿಂಡು ಮಾಪನಗಳು

ಇ) ಈ ಸ್ಥಳವನ್ನು ಸರ್ಕಾರವು ಗಣಿಗಾರಿಕೆ ಉದ್ದೇಶಕ್ಕೆ ಬಳಸಲು ಇಚ್ಛಿಸಿದೆ. ಈ ನಿಟ್ಟಿನಲ್ಲಿ ಈ ಪ್ರದೇಶವನ್ನು ರಾಜ್ಯ ಪತ್ರದಲ್ಲಿ ಖನಿಜ ರಿಯಾಯಿತಿ ನಿಯಮ, 1960ರ ನಿಯಮ 59ರ ಪ್ರಕಾರ ಮರು ಮಂಜೂರಾತಿಗೆ ಪ್ರಕಟಗೊಳಿಸಲು ಕ್ರಮ ಕೈಗೊಂಡಿದೆ.

ಈ) ಈ ಪ್ರದೇಶದ ಲಭ್ಯತೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ ನಂತರ ಅರ್ಜಿಗಳು ಬಂದರೆ ಅವನ್ನು ನಿಯಮಾನುಸಾರ ಪರಿಗಣಿಸಲಾಗುವುದು.

ಉ) ಅರ್ಜಿಗಳು ಬಂದ ನಂತರ ತಿಳಿಯುವುದು.

ಕರಾವಳಿ ಜಿಲ್ಲೆಗಳಲ್ಲಿ ಮತ್ಸ್ಯಕ್ಷಾಮ

2093 (2282) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರರು ಮತ್ಸ್ಯ ಕ್ಷಾಮ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;